ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 26–08–2019

## Media Invites

1. **"Karnataka International Travel Expo"**

**Inauguration:**

**T.K. Anilkumar**
**Secretary, Tourism, Govt. of Karnataka**
**and**
**K. Shyamaraju**
**President**
**Karnataka Tourism Society**

**Date: 27-08-2019 Tuesday Time : 4.30 PM**
**Venue : The Lalit 2, Hotel Lalit Ashok, Bengaluru.**

## ಪತ್ರಿಕಾ ಪ್ರಕಟಣೆ

## ಫಲಿತಾಂಶ ಪ್ರಕಟ

**ಬೆಂಗಳೂರು, ಆಗಸ್ಟ್ 26 ( ಕರ್ನಾಟಕ ವಾರ್ತೆ ) :**

ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ 2018 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಅಧಿಸೂಚನೆ ಸಂಖ್ಯೆ ಇ.ಪ(1)345/2019–20/ಪಿಎಸ್‌ಸಿ ದಿನಾಂಕ: 20/23–08–2019 ರಲ್ಲಿ ಪ್ರಕಟಿಸಲಾಗಿದ್ದು, ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ನೋಡಬಹುದಾಗಿರುತ್ತದೆ.

ಇಲಾಖಾ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಅಂಕಗಳ ಮರು ಎಣಿಕೆಗಾಗಿ ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ನಿಗದಿತ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## RESULTS ANNOUNCED

**Bengaluru, August 26, (Karnataka Information)**

Results of Departmental Examinations of 2018 Second Session are published vide this office Notification No. DE(1)345/PSC/2019-20, Dated 20/23-8-2019 in the Commission's website "http//kpsc.kar.nic.in". Candidates who have not passed the Departmental Examinations can apply for re-totaling of marks submitting of prescribed fees within 30 days from the date of publication of results.

****

## "ಜನಸ್ಪಂದನ ಸಭೆ"

**ಬೆಂಗಳೂರು, ಆಗಸ್ಟ್ 26 ( ಕರ್ನಾಟಕ ವಾರ್ತೆ ) :**

**ಪ್ರಾದೇಶಿಕ ಸಾರಿಗೆ ಕಚೇರಿ, ಜ್ಞಾನಭಾರತಿ, ಮಲ್ಲತ್ತಹಳ್ಳಿ, ಬೆಂಗಳೂರು ಇಲ್ಲಿ ಆಗಸ್ಟ್ 29 ರಂದು ಮಧ್ಯಾಹ್ನ 3–00 ಗಂಟೆಗೆ "ಜನಸ್ಪಂದನ" ಸಭೆಯನ್ನು ನಡೆಸಲಾಗುತ್ತದೆ.**

**ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು, ಸಾರ್ವಜನಿಕರ/ವಾಹನ ಮಾಲೀಕರ ಕುಂದು ಕೊರತೆಗಳನ್ನು ಆಲಿಸುತ್ತಾರೆ.**

**ಸಾರ್ವಜನಿಕರು/ವಾಹನ ಮಾಲೀಕರು ಭಾಗವಹಿಸಿ, ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಸಂಚಾರಿ ಗ್ರಂಥಾಲಯದ ವಾಹನ ಸೇವೆ ತಾತ್ಕಾಲಿಕ ಸ್ಥಗಿತ

**ಬೆಂಗಳೂರು, ಆಗಸ್ಟ್ 26 ( ಕರ್ನಾಟಕ ವಾರ್ತೆ ) :**

ನಗರ ಕೇಂದ್ರ ಗ್ರಂಥಾಲಯ, ಕೇಂದ್ರ ವಲಯ, ಬೆಂಗಳೂರು ಇಲ್ಲಿನ ಸಂಚಾರಿ ಗ್ರಂಥಾಲಯ ವಾಹನದ ಯೋಗ್ಯತಾ ಪ್ರಮಾಣ ಪತ್ರ ನವೀಕರಿಸಬೇಕಿದ್ದು, ತಪಾಸಣೆಗಾಗಿ ಆರ್.ಟಿ.ಓ. ಕಚೇರಿಗೆ ಹೋಗಬೇಕಾಗಿರುವ ಹಿನ್ನೆಲೆಯಲ್ಲಿ ವಾಹನದ ಸೇವೆ ನೀಡಲು ಸಾಧ್ಯವಾಗುತ್ತಿಲ್ಲ. ನವೀಕರಣದ ನಂತರ ಎಂದಿನಂತೆ ಸಾರ್ವಜನಿಕರಿಗೆ ಸಂಚಾರಿ ಗ್ರಂಥಾಲಯ ಸೇವೆ ದೊರೆಯಲಿದೆ ಎಂದು ಗ್ರಂಥಾಲಯ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

## ಕಚೇರಿ ಸ್ಥಳಾಂತರ

**ಬೆಂಗಳೂರು, ಆಗಸ್ಟ್ 26 ( ಕರ್ನಾಟಕ ವಾರ್ತೆ ) :**

ಜಿಲ್ಲಾ ನೋಂದಣಿ ಕಚೇರಿ, ಬಸವನಗುಡಿ ನೋಂದಣಿ ಜಿಲ್ಲೆ, ಬೆಂಗಳೂರು ಕಚೇರಿಯ ಹಾಲಿ ಬಿ.ಎಂ.ಟಿ.ಸಿ. ಕಟ್ಟಡ, 2ನೇ ಮಹಡಿ, ಶ್ರೀವಿದ್ಯಾನಗರ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು – 560 085 ಈ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಚೇರಿಯು ಇದೀಗ ನಂ 799, ದ್ವಾರಕಾ, ಮೊದಲನೇ ಮಹಡಿ, ಬನಶಂಕರಿ 3ನೇ ಹಂತ, 2ನೇ ಫೇಸ್, 7ನೇ ಬ್ಲಾಕ್, 100 ಅಡಿ ರಿಂಗ್ ರಸ್ತೆ, ಉಡುಪಿ ಗ್ರ್ಯಾಂಡ್ ಹೋಟೆಲ್ ಪಕ್ಕ, ಬೆಂಗಳೂರು – 560 085 ಈ ವಿಳಾಸದಲ್ಲಿ ಆಗಸ್ಟ್ 19 ರಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಜಿಲ್ಲಾ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪ್ರಕಟಣೆ ತಿಳಿಸಿದೆ.